# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 4 ಆರ್‌ಟಿಐ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 29.1.2007.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಆ.ಸು., ತರಬೇತಿ ಮತ್ತು ರಾ.ವಿ.ವೇ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು - 560 001.

ಇವರಿಗೆ:
1. ಎಲ್ಲಾ ಇಲಾಖಾ ಮುಖ್ಯಸ್ಥರು
2. ಎಲ್ಲಾ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯಿತಿಯ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ: ಮಾಹಿತಿ ಹಕ್ಕು ಅಧಿನಿಯಮ ೨೦೦೫ ಮತ್ತು ಮಾಹಿತಿ ಹಕ್ಕು ನಿಯಮಗಳ ಅಡಿಯಲ್ಲಿ ಪ್ರಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ:-

---

ಮಾಹಿತಿ ಹಕ್ಕು ಅಧಿನಿಯಮ ೨೦೦೫ (ಕೇಂದ್ರ ಕಾಯಿದೆ ಸಂ:೨೨) ಈಗಾಗಲೇ ರಾಜ್ಯದಲ್ಲಿ ೨೦೦೫ರ ಜೂನ್ ೧೫ರಿಂದ ಜಾರಿಗೆ ಬಂದಿರುವುದು ಸರಿಯಷ್ಟೆ. ಈ ಕಾಯಿದೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವ ಗುರುತರವಾದ ಜವಾಬ್ದಾರಿಯು ಅಧಿಕಾರಿಗಳ ಮೇಲಿರುವುದನ್ನು ಮನಗಾಣಬೇಕಾಗಿದೆ.

ಮಾಹಿತಿ ಹಕ್ಕು ಕಾಯಿದೆ ಅನುಷ್ಠಾನದಿಂದ ಸಾರ್ವಜನಿಕರಿಗೆ ಆಗಿರುವ ಅನುಕೂಲಗಳು ಹಾಗೂ ಇವುಗಳನ್ನು ಕಾರ್ಯರೂಪಕ್ಕೆ ತಂದ ನಂತರ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸದರಿ ಅಧಿನಿಯಮ/ನಿಯಮಗಳ ಚೌಕಟ್ಟಿನಲ್ಲಿ ಸಾರ್ವಜನಿಕರಿಂದ ರಚನಾತ್ಮಕ ಸಲಹೆಗಳನ್ನು ಪಡೆಯಲು, ಸಿಆಸು ಇಲಾಖೆಯ (ಆಡಳಿತ ಸುಧಾರಣೆ) ಪ್ರಧಾನ ಕಾರ್ಯದರ್ಶಿಯವರ ಉಪಸ್ಥಿತಿಯಲ್ಲಿ ದಿನಾಂಕ: ೨೦.೧.೨೦೦೭ರಂದು ಒಂದು ಔಪಚಾರಿಕ ಸಂವಾದವನ್ನು ನಡೆಸಲಾಯಿತು, ಸದರಿ ಸಂವಾದದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದು, ಆ ಸಂವಾದದಲ್ಲಿ ಅವರುಗಳು ನೀಡಿದ ಸಲಹೆ ಮತ್ತಿತರ ಅಂಶಗಳ ಕುರಿತು ಚರ್ಚಿಸಲಾಗಿ, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಯಿತು. ಹಾಗೂ ಸದರಿ ನ್ಯೂನತೆಗಳನ್ನು ಯಾವ ರೀತಿ ಸರಿಪಡಿಸಬೇಕು ಎನ್ನುವ ಬಗ್ಗೆಯೂ, ಪ್ರತಿ ನ್ಯೂನತೆಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮದಡಿ ಕೈಗೊಳ್ಳಬೇಕಾದ ಕ್ರಮವನ್ನು ನಮೂದಿಸಿದೆ:-

(ಅ) ಮಾಹಿತಿ ಹಕ್ಕು ಅಧಿನಿಯಮ ಸೆಕ್ಷನ್ 5ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳನ್ನು ನೇಮಿಸದೇ ಇರುವುದು ಹಾಗೆ ನೇಮಿಸಿದ್ದರೂ ಕೂಡ ಅದನ್ನು ತಮ್ಮ ತಮ್ಮ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸದೇ ಇರುವುದು;

- ಸದರಿ ನಿಯಮದಡಿಯಲ್ಲಿ (ಅಧಿನಿಯಮ 5), ಕಾಯಿದೆ ಜಾರಿಗೆ ಬಂದ 100 ದಿನಗಳೊಳಗಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸಬೇಕು. ಪ್ರತಿ ಇಲಾಖೆ/ಕಛೇರಿಗಳು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸಿರುವ ಕುರಿತು ಪಟ್ಟಿಯನ್ನೊಳಗೊಂಡ ಒಂದು ಕಿರುಹೊತ್ತಿಗೆಯನ್ನು ತಯಾರು ಮಾಡಿ, ಸಂಬಂಧಿಸಿದ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು (ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿಳಾಸ, ದೂರವಾಣಿ ಸಂಖ್ಯೆ ತಪ್ಪದೆ ನಮೂದಿಸಬೇಕು)

(ಅ) ಮಾಹಿತಿ ಹಕ್ಕು ಅಧಿನಿಯಮ 4(1) (ಬಿ)ರಡಿಯಲ್ಲಿ ಮಾಹಿತಿ ತಯಾರು ಮಾಡಿಲ್ಲದಿರುವುದು. ಹಾಗೆ ತಯಾರು ಮಾಡಿದ್ದರೂ ಅದನ್ನು ತಮ್ಮ ತಮ್ಮ ಇಲಾಖಾ ಕಛೇರಿಗಳಲ್ಲಿನ ಸೂಚನಾ ಫಲಕದಲ್ಲಿ ಪ್ರಕಟಿಸಧೇ ಇರುವುದು; ......

- ಸದರಿ ನಿಯಮದಡಿಯಲ್ಲಿ, ಕಾಯಿದೆ ಪ್ರಕಟಗೊಂಡು ಜಾರಿಗೊಂಡ ದಿನದಿಂದ 120 ದಿವಸಗಳೊಳಗಾಗಿ {ಕಾಯಿದೆ 4(ಬಿ)} ಸಂಬಂಧಿಸಿದ ಎಲ್ಲಾ (ಈ ಕಾಯಿದೆಯಡಿ ಬರುವ) ಕಛೇರಿಗಳು, ತಯಾರು ಮಾಡಿ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು. ಅಲ್ಲದೆ, ಪ್ರತಿ ವರ್ಷ ಡಿಸೆಂಬರ್ 31ರೊಳಗೆ ಇದನ್ನು ನವೀಕರಿಸಿ ಪ್ರಕಟ ಪಡಿಸಬೇಕು.

(ಇ) ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮಗಳಡಿಯಲ್ಲಿ ಮಾಹಿತಿ ಕೋರಿದಾಗ, ಸಾರ್ವಜನಿಕ ಮಾಹಿತಿ ಅಧಿಕಾರಿಯು ತನ್ನಲ್ಲಿ ಸಂಬಂಧಿಸಿದ ಮಾಹಿತಿಯು ಲಭ್ಯವಿದ್ದರೂ ಸದರಿ ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ಅವಧಿಯಲ್ಲಿ ಮಾಹಿತಿ ನೀಡುತ್ತಿಲ್ಲದಿರುವುದು; ......

- ಸಾರ್ವಜನಿಕರು ಅರ್ಜಿ ನೀಡಿದಾಗ ಮಾಹಿತಿ ಲಭ್ಯವಿದ್ದರೂ ಲಭ್ಯವಿಲ್ಲವೆಂದು ತಿಳಿಸಿದಾಗ, ಸಾರ್ವಜನಿಕರು ಮೇಲಿನ ಪ್ರಾಧಿಕಾರಿ/ರಾಜ್ಯ ಮಾಹಿತಿ ಆಯೋಗದಲ್ಲಿ ಅಪೀಲು ದಾಖಲಿಸಿದಲ್ಲಿ, ಸಂಬಂಧಿಸಿದ ಮಾಹಿತಿ ಅಧಿಕಾರಿಗಳು ಇದಕ್ಕೆ ಜವಾಬ್ದಾರರಾಗಿದ್ದು, ಮುಂದಿನ ಆಗುಹೋಗುಗಳಿಗೆ ಅವರೇ ಜವಾಬ್ದಾರರಾಗುತ್ತಾರೆ. ಮಾಹಿತಿ ಅಧಿಕಾರಿಯು ಮಾಹಿತಿ ಒದಗಿಸುವ ಬಗ್ಗೆ ನಿಗದಿತ ಅವಧಿಯಲ್ಲಿ ತೀರ್ಮಾನ ತೆಗೆದುಕೊಳ್ಳದಿದ್ದಲ್ಲಿ ಅಥವಾ ಮಾಹಿತಿ ಒದಗಿಸದಿದ್ದಲ್ಲಿ ಅಂತಹ ಮಾಹಿತಿ ಅಧಿಕಾರಿಯು ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾರೆಂದು ಭಾವಿಸಬೇಕಾಗುತ್ತದೆ. ಆದ್ದರಿಂದ ನಿಗದಿತ ದಿನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

(ಈ) ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಾರ್ವಜನಿಕರು, ಅರ್ಜಿಯೊಂದಿಗೆ ನೀಡುವ ಶುಲ್ಕದ ಬಗ್ಗೆ ಅನವಶ್ಯಕ ಗೊಂದಲ ಸೃಷ್ಟಿಸುವುದು ಅಂದರೆ, ಶುಲ್ಕವನ್ನು ಯಾವ ರೀತಿ ಪಾವತಿ ಮಾಡಬೇಕು; ಎಲ್ಲಿ ಪಾವತಿ ಮಾಡಬೇಕು ಎನ್ನುವ ಬಗ್ಗೆ ಜಿಜ್ಞಾಸೆಗಳು ತಲೆದೋರುತ್ತಿರುವ ಬಗ್ಗೆ;-

- ಸಾರ್ವಜನಿಕರು ಮಾಹಿತಿ ಪಡೆಯಲು ಸಲ್ಲಿಸಿದ ಅರ್ಜಿಯಲ್ಲಿ ನಮೂದಿಸಿದ ವಿವರಗಳು ಸಮರ್ಪಕವಾಗಿ ಭರ್ತಿ ಮಾಡಿದ ಬಗ್ಗೆ ಮತ್ತು ಅರ್ಜಿದಾರರ ವಿಳಾಸ, ಸಹಿಯೊಂದಿಗೆ ಅರ್ಜಿಯ ಜೊತೆಗೆ ನಿಗದಿತ ಅರ್ಜಿಯ ಶುಲ್ಕ ಸಂದಾಯವಾದ ಬಗ್ಗೆ ಪರಿಶೀಲಿಸಿ, ಶುಲ್ಕ ಸಂದಾಯ ಮಾಡಲು ಅರ್ಜಿದಾರರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಶುಲ್ಕವನ್ನು ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರಿನಲ್ಲಿ ಪೇ-ಆರ್ಡರ್, ಭಾರತೀಯ ಅಂಚೆ, ಬ್ಯಾಂಕರ್ಸ್ ಚೆಕ್, ಡಿಡಿ ಅಥವಾ ನಗದು ಹಣ ಪಾವತಿ ಮೂಲಕ ಪಡೆದು ನಿಯಮಾನುಸಾರ ಲೆಕ್ಕ ಶೀರ್ಷಿಕೆ 0220-60-800-0-03 "Receipt under Information Act"ಗೆ ಜಮಾ ಮಾಡುವುದು.

ಮಾಹಿತಿ ಹಕ್ಕು ಅಧಿನಿಯಮ/ನಿಯಮಗಳ ಕುರಿತು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸಾಕಷ್ಟು/ಪೂರ್ಣ ಜ್ಞಾನವಿಲ್ಲದೆ ಇರುವುದು: ಜಿಲ್ಲಾ ಮಟ್ಟದಲ್ಲಿನ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಈ ಕುರಿತು ತರಬೇತಿ ನೀಡಲು ಕ್ರಮವಹಿಸಬೇಕು. ಸಿಬ್ಬಂದಿ/ಅಧಿಕಾರಿಗಳಿಗೆ ತರಬೇತಿ ಅವಶ್ಯಕತೆ ಬಗ್ಗೆ ಸಿಆಸುಇ (ಆಸು) ಇಲಾಖೆಗೆ ಅಗತ್ಯ ವಿವರಗಳನ್ನು ನೀಡಿದಲ್ಲಿ, ಜಿಲ್ಲಾ ತರಬೇತಿ ಸಂಸ್ಥೆಗಳ ಮೂಲಕ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಾರ್ವಜನಿಕರಿಗೆ ನೀಡುವ ಯಾವುದೇ (ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ) ಮಾಹಿತಿಯನ್ನು ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂಬ ಅಂಕಿತ ನಾಮದೊಂದಿಗೆ (Designation) ಪತ್ರಗಳನ್ನು ಸಹಿ ಮಾಡುವುದು;

ಕರ್ನಾಟಕ ಮಾಹಿತಿ ಹಕ್ಕು ಅಧ್ಯಾದೇಶ 2000, ಈಗಾಗಲೇ ನಿರಸನ (repeal) ಗೊಂಡಿದ್ದು, ಕೆಲವು ಕಛೇರಿಗಳು, ಈಗಲೂ ಕೂಡ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಕ್ಷಮ ಪ್ರಾಧಿಕಾರಿಗಳನ್ನು ಇದರಡಿಯಲ್ಲಿ ನೇಮಿಸುತ್ತಿರುವುದು, ಮತ್ತು ಆದೇಶಗಳನ್ನು ನಿರಸನಗೊಂಡಿರುವ ಈ ಅಧ್ಯಾದೇಶದಡಿಯಲ್ಲಿ ಹೊರಡಿಸುತ್ತಿರುವುದು ಸಹ, ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಇಲಾಖೆ/ಕಛೇರಿಗಳಡಿಯಲ್ಲಿ ಬರುವ ಅಧೀನ ಕಛೇರಿಗಳಿಗೆ ಲಿಖಿತ ಮೂಲಕ ಸೂಕ್ತ ತಿಳುವಳಿಕೆ ನೀಡಿ, ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2000 ನಿರಸನಗೊಂಡು ಕೇಂದ್ರ ಸರ್ಕಾರದ ಮಾಹಿತಿ ಹಕ್ಕು ಕಾಯಿದೆ 2005 ಜಾರಿಯಲ್ಲಿರುವ ಬಗ್ಗೆ ಮಾಹಿತಿ ನೀಡುವುದು.

ತಮ್ಮ ನಂಬುಗೆಯ,

(ಶಮೀ[illegible] ಬಾನು)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)

ಪ್ರತಿ:

1. ಅಧ್ಯಕ್ಷರು, ಕ್ರಿಯಾಕಟ್ಟೆ, ಬೆಂಗಳೂರು
2. ಅಧ್ಯಕ್ಷರು, ಹಿರಿಯ ನಾಗರೀಕರ ವೇದಿಕೆ, ಬೆಂಗಳೂರು
3. ಸಂಪಾದಕರು, ನೇರ ಮಾತು ಕನ್ನಡ ಮಾಸಪತ್ರಿಕೆ, ಬೆಂಗಳೂರು